ಶ್ರೀ ಎ. ಮುನಿಯಪ್ಪ.—ಈ ರಸ್ತೆ ಅಂದಾಜಾಗಿ ರುವುದೆಷ್ಟಕ್ಕೆ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ಲಕ್ಷ ಚಿಲ್ಲರೆ.

ಶ್ರೀ ಎ. ಮುನಿಯಪ್ಪ.—ಹಳೆಯ ಕಲ್ಲುಗಳನ್ನೂ ಉಪಯೋಗಿಸಿದೆ ಎಂದು ಹೇಳಿದೆ, ಎಷ್ಟು ದೂರದಿಂದ ಅದನ್ನು ತಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲೇ ಹತ್ತಿರದಲ್ಲ ನಂದಿಬೆಟ್ಟ ಇದೆ.

ಶ್ರೀ ಎ. ಮುನಿಯಪ್ಪ.—ಹೊಸಕಲ್ಲಿಗೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲೇ ನಮೂದು ಮಾಡಿದೆ.

ಶ್ರೀ ಎ. ಮುನಿಯಪ್ಪ.—ಹೊಸ ಕಲ್ಲುಗಳಿಗೆ ಲೀಡ್ ಎಷ್ಟು ಕೊಟ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಲೀಡ್ ಸೇರಿ ಐದು ರೂಪಾಯಿ.

ಶ್ರೀ ಎ. ಮುನಿಯಪ್ಪ.—ಹೊಸ ಕಲ್ಲುಗಳು ಎಷ್ಟು ದೂರದಿಂದ ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ದೂರದಿಂದ ಎನ್ನುವುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಅಲ್ಲೇ ಬ್ಲಾಸ್ಟ್ ಮಾಡಿದ ಕಲ್ಲುಗಳಿಂದ ಕಟ್ಟಿ ಮೂರು ಮೈಲಿಯಿಂದ ತಂದಿದೆ ಎಂದು ಹೇಳಿ ಹಣ ದುರುಪಯೋಗವಾಗಿರುವುದನ್ನು ತಮ್ಮ ಗಮನಕ್ಕೆ ತಂದದ್ದು ಜ್ಞಾಪಕವಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ಕೆಲವರು ತಂದಿದ್ದರು, ತನಿಖೆ ಮಾಡಿದ್ದೇನೆ. ಅದರಲ್ಲಿ ಅಷ್ಟು ರೋಪ ನಡೆದಿಲ್ಲವೆಂದು ಗೊತ್ತಾಯಿತು.

ಶ್ರೀ ಎ. ಮುನಿಯಪ್ಪ.—ಸ್ಥಳಕ್ಕೆ ಹೋಗಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹೋಗಿದ್ದೇನೆ.

ಶ್ರೀ ಎ. ಮುನಿಯಪ್ಪ.—ಪ್ಯಾರಾಪೆಟ್ ಸಿಮೆಂಟಿನಿಂದ ಕಟ್ಟಿದ್ದೊ ಅಥವಾ ಗಾರೆಯದೊ?

Sri Kadidal MANJAPPA.—I do not remember.

ಶ್ರೀ ಎ. ಮುನಿಯಪ್ಪ.—ಪ್ಯಾರಾಪೆಟ್ ಬಿದ್ದು ಹೋಗಿ, ಸರ್ಕಾರಿ ಬಸ್ಸುಗಳಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಈಚೆಗೆ ನಾನು ಅಲ್ಲಗೆ ಹೋಗಿಲ್ಲ.

ಶ್ರೀ ಎ. ಮುನಿಯಪ್ಪ.—ಬಹಳ ಹಣ ಅನ್ಯಾಯವಾಗಿದೆ, ವಿಚಾರಣೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕಷ್ಟ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾದ ಆಧಾರ ಏದ್ದರೆ ವಿಚಾರಮಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಎ. ಮುನಿಯಪ್ಪ.—ಹಾಗಾದರೆ, ಆಗಿಲ್ಲವೆಂದು ಹೇಗೆ ಗೊತ್ತು?

ಶ್ರೀ ಕಡಿದಾಳ್ ಮಂಜಪ್ಪ.—ಸಂಬಂಧಪಟ್ಟ ಎಗ್ಜಿಕ್ಯೂಟಿವ್ ಇಂಜಿನಿಯರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರು ಹೇಳಿದ ವರದಿಯ ಆಧಾರದ ಮೇಲೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈ ಪ್ರಶ್ನೆಗೆ ಉತ್ತರ ಒದಗಿಸಿದವರು ಯಾರು?

ಶ್ರೀ ಕಡಿದಾಳ್ ಮಂಜಪ್ಪ.—ಇಂಜಿನಿಯರಿಂಗ್ ಇಲಾಖೆಯವರು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಯಾರು ಹಣವನ್ನು ದುರುಪಯೋಗಪಡಿಸಿದ್ದಾರೋ ಅವರುತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ಚೀಫ್ ಇಂಜಿನಿಯರಿಂದ ಬಂದಿರುವುದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈ ಪ್ರಶ್ನೆಗೆ ಜವಾಬು ಕೊಡಿ ಎಂದು ಯಾವ ಅಸಿಸ್ಟೆಂಟ್ ಇಂಜಿನಿಯರಿಗೆ ಕಳುಹಿಸಿದ್ದೀರೋ ಅವರು ತಾನೆ ದುರುಪಯೋಗಪಡಿಸಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಗುಂಡೂರಾವ್ ಎಂಬವರು ಎಗ್ಜಿಕ್ಯೂಟಿವ್ ಇಂಜಿನಿಯರು, ಅವರು ಕಳುಹಿಸಿರುವುದು.

Mr. SPEAKER.—Whether that man has constructed the road does not arise out of this question.

Sri Kadidal MANJAPPA.—He is not the person who was in charge of that road.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಈಗ ಬಂದಿರುವವರು ಹೊಸಬರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಇದು ಹಳಬರ ಕಾಲದಲ್ಲಿ ನಡೆದ ಕೆಲಸವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ಅಸಿಸ್ಟೆಂಟ್ ಇಂಜಿನಿಯರು ಎಷ್ಟು ದಿವಸದಿಂದಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಎರಡು ವರ್ಷದಿಂದ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರಿಗೆ ಐದು ನಲ ವರ್ಗವಾಗಿದ್ದೂ ಅಲ್ಲೇ ಇದ್ದಾರಲ್ಲವೇ?

Mr. SPEAKER.—That does not arise.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಆ ಅಸಿಸ್ಟೆಂಟ್ ಇಂಜಿನಿಯರು ರಸ್ತೆಗಳನ್ನೇ ತಿಂದುಹಾಕಿದ್ದಾರೆಂಬುದು ಗೊತ್ತಿದೆಯೆ? (ನಗು!)

ಅಧ್ಯಕ್ಷರು.—ರಸ್ತೆಯನ್ನು ಹೇಗೆ ತಿನ್ನುತ್ತಾರೆ?

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರ ಮೇಲೆ ತಾನೆ ಲಂಚನಿರೋಧ ಇಲಾಖೆಯವರು ತನಿಖೆ ನಡೆಸಿದ್ದು?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಅವರು ಅಲ್ಲೇ ಇರಬೇಕೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೇನೂ ಇಲ್ಲ; ಜಹಗೀರಿ ಹಾಕಿಲ್ಲ; ಬೇರೆಕಡೆ ವರ್ಗಮಾಡಬಹುದು.

Roads from Haranahalli to Javagal.

Q.—547. **Sri B. CHIKKANNA** (Javagal).—

Will the Government be pleased to state:—

(*a*) when the road from Haranahalli to Javagal in Arsikere Taluk was formed and its length in miles;

(*b*) whether this road is completely formed;

(*c*) the number of acres of land in each village acquired to form this road;

(*d*) for the lands so acquired, the names of persons to whom either compensation or lands in exchange was given, and the amount of compensation or the extent of land so given?

A.—Sri Kadidal MANJAPPA (Minister for Revenue and Public Works).—

(*a*) (i) In October 1950.
(ii) Thirteen.

(*b*) Almost completed.

(*c*) No land was acquired as the formation of the road had been done by the concerned villagers.

(*d*) Does not arise in view of reply to (*c*).

ಶ್ರೀ ಬಿ. ಚಿಕ್ಕಣ್ಣ.—ಬಹಳಮಟ್ಟಿಗೆ ಈ ರಸ್ತೆ ಪೂರ್ತಿಯಾಗಿದೆಯೆಂದು ಹೇಳಿದೆ, ಎಷ್ಟಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—13 ಮೈಲಿ ರಸ್ತೆ ನಿರ್ಮಾಣ ಮಾಡಿದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಇದರಲ್ಲಿ ಎಂಟು ಮೈಲಿ ಆಗಿ ಇನ್ನೂ ಐದು ಮೈಲಿ ಆಗದೇಯಿರುವುದು ಗೊತ್ತಿದೆಯೇ;

ಶ್ರೀ ಕಡಿದಾಳ್ ಮಂಜಪ್ಪ.—ಕೊಂಚ ಉಳಿದಿದೆ.

ಶ್ರೀ ಬಿ. ಚಿಕ್ಕಣ್ಣ.—ಜಾಗ್ರತೆ ಈ ರಸ್ತೆಯನ್ನು ಪೂರ್ತಿ ಮಾಡಬೇಕೆಂದು ಮೂರು ವರ್ಷದಿಂದ ಜನರು ಕೇಳಿಕೊಳ್ಳುತ್ತಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಬಿ. ಚಿಕ್ಕಣ್ಣ.—ಪೂರ್ತಿ ಮಾಡುವುದಕ್ಕೆ ಯಾವಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಮಾಡ ಬೇಕೆಂದು ಇಂಜನಿಯರಿಗೆ ನೋಟಿಸ್ ಕೊಟ್ಟಿದೆ.

ಶ್ರೀ ಬಿ. ಚಿಕ್ಕಣ್ಣ.—ಈ ರಸ್ತೆಯನ್ನು ಮಾಡುವಾಗ ಅನೇಕರ ಜಮೀನನ್ನು ತೆಗೆದುಕೊಂಡು ಮಾಡಿದೆ. ಅದಕ್ಕೆ ಬದಲು ಅವರಿಗೆ ಬೇರೆ ಜಮೀನು ಕೊಡಬೇಕೆಂದು ಸ್ಥಳೀಯ ಅಧಿಕಾರಿಗಳಿಂದ ಶಿಫಾರಸು ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಬಿ. ಚಿಕ್ಕಣ್ಣ.—ಏತಕ್ಕೆ ಇನ್ನೂ ಕೊಟ್ಟಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅಕ್ಟೀಜಿಷ್ಟ್ ಪ್ರೊಸೀಡಿಂಗ್ಸ್ ಷುರು ಮಾಡಿದ್ದಾರೆ.

Loop Road from Gundlupet to Terakanambi (Repairs).

Q.—611. Sri H. K. SHIVARUDRAPPA (Gundlupet-Heggadadevankote).—

Will the Government be pleased to state:—

(*a*) whether the Public Works Department have not suggested the repair of the loop road from Gundlupet to Terakanambi;

(*b*) if so, when the suggestion was made; the reason for not agreeing to this;

(*c*) whether it has not come to their notice that the non repair of this road has inconvenienced the movement of the public?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) In December 1954; the proposal is being examined.

(*c*) No.

Sri H. K. SHIVARUDRAPPA.—I have no supplementaries.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಸ್ತೆಯನ್ನು ನಿರ್ಮಿಸಲು ಅಂದಾಜಾದದ್ದು ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳವರೆಗೆ ಖರ್ಚಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೂವರೆ ಲಕ್ಷಕ್ಕೆ ಅಂದಾಜು ಮಾಡುವಾಗ, ಈ ರಸ್ತೆಯನ್ನು ಯಾರು maintain ಮಾಡಬೇಕೆಂದು ನಿರ್ಧಾರಮಾಡಿಕೊಂಡು ಕಟ್ಟಿದರು?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ನನ್ನ ಲ್ಲಿಲ್ಲ, ಆ ರಸ್ತೆಯನ್ನು ಜಿಲ್ಲಾ ಬೋರ್ಡಿಗೆ ವರ್ಗ ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೂವರೆ ಲಕ್ಷ ರೂಪಾಯಿ ಮಂಜೂರು ಮಾಡುವಾಗ ಈ ರಸ್ತೆಯನ್ನು ಯಾರು ನೋಡಿಕೊಳ್ಳಬೇಕೆಂದು ನಿರ್ಧಾರ ಮಾಡಿದಿರಿ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ನನ್ನ ಲ್ಲಿಲ್ಲ. ಇದು ಆದುದು ಬಹಳ ಹಿಂದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಯಾರು ನೋಡಿಕೊಳ್ಳಬೇಕೆಂದು ನಿರ್ಧಾರವಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೂ ಸ್ಟೇಟ್ ಫಂಡ್ ರಸ್ತೆಯಾಗಿ ಮಾಡಬೇಕೆಂದು ನಿರ್ಧಾರ ಮಾಡಿದೆ.

Roads constructed in Nelamangala Taluk under Famine Relief Works.

Q.—636. Sri D. M. GOVINDARAJU (Nelamangala).—

Will the Government be pleased to state:—

(*a*) the names of roads constructed in Nelamangala Taluk under Famine Relief Works;

(*b*) of them, the roads that belong to the District Board?

A.—Sri Kadidal MANJAPPA (Minister for Revenue and Public Works).—

(*a*) (1) Yantaganahalli to Manchenhalli.

(SRI KADIDAL MANJAPPA.)

(2) Manne to Baragur.

(3) Dobspet to Siddarebetta.

(4) Kunigal to Honnasandra.

(5) Kuntabommanahalli to Yelakyathanahalli.

(6) Nakanakuppe to join Bangalore-Tyamagondlu Road.

(7) Manne to Kannahalli.

(*b*) Sl. Nos. 2, 5, 6 and 7 of the Roads have been recommended by the District Board to the Commissioner for Local Self-Government for sanctioning Government Grant so as to take possession and maintain them.

ಶ್ರೀ ಡಿ. ಎಂ. ಗೋವಿಂದರಾಜು.—ಈ ರಸ್ತೆಗಳಾಗಿ ಎಷ್ಟು ವರ್ಷವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ವರ್ಷ.

ಶ್ರೀ ಡಿ. ಎಂ. ಗೋವಿಂದರಾಜು.—ಎಷ್ಟೆಷ್ಟು ಮೈಲಿ ಇವೆ ?

Sri Kadidal MANJAPPA.—I am sorry that the mileage figure is not with me.

ಶ್ರೀ ಡಿ. ಎಂ. ಗೋವಿಂದರಾಜು.—ಈ ಪಟ್ಟಿಯಲ್ಲಿರುವ 2, 5, 6 ಮತ್ತು 7ನೆಯ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ವಹಿಸಿಕೊಳ್ಳುವುದಕ್ಕೆ ಸ್ಥಳೀಯ ಪ್ರಭಾವಿ ಕಾರ ಸಂಸ್ಥೆಗಳ ಕಮಿಷನರಿಗೆ ಶಿಫಾರನು ಬಂದಿದೆ ಎಂದು ಹೇಳಲಾಗಿದೆ, ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಡಿ. ಎಂ. ಗೋವಿಂದರಾಜು.—ಅವರು ಶಿಫಾರನು ಮಾಡಿರುವಂತೆ ಜಾಗ್ರತೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡಬೇಕು. ಜಿಲ್ಲಾಧಿಕಾರಿಗಳೂ ಪರಿಶೀಲನೆ ಮಾಡಬೇಕಾಗುತ್ತದೆ. ನಿರ್ದಿಷ್ಟವಾಗಿ ಯಾವಾಗ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಶಿಪಾರ್ಸು ಮಾಡಿರುವುದನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡಬೇಕು. ಜಿಲ್ಲಾಧಿಕಾರಿಗಳು ಈ ವಿಚಾರವನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಡೆಪ್ಯುಟಿ ಕಮಿಷನರ್ ಸ್ಥಳೀಯ ಸಂಸ್ಥೆಯ ಕಮಿಷ್ಟರಿಗೆ ಕಳುಹಿಸಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಕಮಿಷನರಿಂದ ಉತ್ತರ ಬಂದಮೇಲೆ ಆ ವಿಚಾರವನ್ನು ಯೋಚನೆ ಮಾಡುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ಒಂದು ವರ್ಷವಾದರೂ ಇನ್ನೂ ಬಾರದೆ ಇರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡೋಣ.

Roads and Culverts (Construction in Malnad District).

Q.—354. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether it is a fact that the Central Government have given a grant of Rs. 50 lakhs for construction of roads, culverts, etc., in Malnad Districts;

(*b*) if so, how this amount is distributed and on what items (the amount given may kindly be furnished districtwar) ?

A.—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of the above reply.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಲೆನಾಡು ರಸ್ತೆಗಳ ದುರಸ್ತು ಮಾಡುವುದು ಮತ್ತು culvert ಹಾಕುವುದಕ್ಕೋಸ್ಕರ ಮೈಸೂರು ಸರ್ಕಾರದವರು ಏನಾದರೂ ಪ್ರತ್ಯೇಕವಾಗಿ ಹಣವನ್ನು ಒದಗಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು ಪ್ರಾಂತ್ಯಗಳಲ್ಲಿ ನಂಚಾರ ಸೌಕರ್ಯಗಳನ್ನು ಉತ್ತಮಪಡಿಸುವುದಕ್ಕೋಸ್ಕರ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವಂತೆ ನಮಾರು 7 ಲಕ್ಷಕ್ಕೆ ಮೇಲ್ಪಟ್ಟು ಹಣವನ್ನು ಖರ್ಚು ಮಾಡಿದ್ದೇವೆ. ಈ ಸಾಲಿನ Budget ನಲ್ಲಿಯೂ ಇದಕ್ಕಾಗಿ ಒದಗಿಸಿದ್ದೇವೆ.

Mr. SPEAKER.—It refers to the Central Government Grant.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಗ್ರಾಂಟಿನಲ್ಲಿ ಯಾವ ಯಾವ ಜಿಲ್ಲೆಗೆ ಯಾವ ಯಾವ ರೀತಿ ವಿಲೇವಾರಿ ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಅಂಕಿಅಂಶಗಳು ಈಗ ನನ್ನಲ್ಲಿ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಬಹು ಭಾಗದ ಹಣವನ್ನು ಕೆಲವು ರಸ್ತೆಗಳಲ್ಲಿ concrete ಹಾಕಿಸುವುದಕ್ಕೆ ಖರ್ಚು ಮಾಡುತ್ತಿದ್ದೀರಿ ಎಂಬುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು development grant ನಿಂದ concrete ಮಾಡುವುದಕ್ಕೋಸ್ಕರ 3 ಕಾನನ್ನೂ ಉಪಯೋಗಿಸುತ್ತಾ ಇಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕಡೂರು ಡಿಸ್ಟ್ರಿಕ್ಟಿನಲ್ಲಿ ರಸ್ತೆಗಳನ್ನು concrete ಮಾಡಿಸಲು ಹಣವನ್ನು ಹೆಚ್ಚು ಮಾಡಿರುವುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು "50 ಸಿವಿರ್ ವರ್ಕ್ಸ್"ನಿಂದ ಖರ್ಚುಮಾಡಿರತಕ್ಕ ಹಣ.